**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ನಾಗಮಂಗಲ.**

ಸಿ.ಸಿ- 332/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ಹನುಮಂತೇಗೌಡ | ಡಿ.ಡಬ್ಲ್ಯೂ | : | 1 |
| ತಂದೆ / ಗಂಡನ ಹೆಸರು | : ಮುಕ್ಕೇಶ | ದಿನಾಂಕ | : | 23-02-2026 |
| ವಯಸ್ಸು | : 45 ವರ್ಷ | | | |
| ಉದ್ಯೋಗ | : ವ್ಯಾಪಾರಿ | | | |
| ವಾಸಸ್ಥಳ | : ಸುಖಧಾರೆ ಗ್ರಾಮ, ನಾಗಮಂಗಲ | | | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ** ಆರೋಪಿ **ಪರ ಶ್ರೀ. ಬಿ. ಜಿ. ಎಸ್. ವಕೀಲರಿಂದಃ**

1. ಫಿರ್ಯಾದುದಾರರು 2020 ನೇ ಇಸವಿಯಲ್ಲಿ ಚೀಟಿ ವ್ಯವಹಾರ ನಡೆಸುತ್ತಿದ್ದು ಅದು 1 ಲಕ್ಷ ರೂಪಾಯಿಗಳ 17 ತಿಂಗಳ ಚೀಟಿ ಆಗಿದ್ದು ನಾನು ಅದರ ಸದಸ್ಯನಾಗಿದ್ದೆನು. ಸದರಿ ಚೀಟಿಯಲ್ಲಿ ಸುಮಾರು 20 ಜನ ಸದಸ್ಯರು ಇದ್ದರು. ನಾನು ತಿಂಗಳಿಗೆ 5 ಸಾವಿರ ರೂಪಯಿಗಳಂತೆ ಕಂತುಗಳನ್ನು ಪಾವತಿ ಮಾಡುತ್ತಿದ್ದೆನು. ಸದರಿ ಚೀಟಿಯ ಭದ್ರತೆಗಾಗಿ ಫಿರ್ಯಾದುದಾರರು ನನ್ನಿಂದ ಚೆಕ್ಕನ್ನು ಪಡೆದುಕೊಂಡಿದ್ದರು. ನಾನು ಸದರಿ ಚೀಟಿಯ 2 ಕಂತುಗಳನ್ನು ಪಾವತಿ ಮಾಡಿ 3 ನೇ ಕಂತಿನ ದಿನದಿಂದು ಚೀಟಿಯನ್ನು ಕೂಗಿ ಫಿರ್ಯಾದುದಾರರವರಿಂದ 60 ಸಾವಿರ ರೂಪಾಯಿಗಳನ್ನು ಪಡೆದುಕೊಂಡಿದ್ದೆನು. ನಂತರ ನಾನು ಉಳಿದ ಚೀಟಿಯ ಕಂತುಗಳನ್ನು ಸಹ ಪಾವತಿ ಮಾಡಿದ್ದೆನು. ಚೀಟಿ ಮುಗಿದ ನಂತರ ನಾನು ನನ್ನೊಂದಿಗೆ ಮಂಜು ಹಾಗೂ ವೆಂಕಟೇಶ ಎಂಬುವವರನ್ನು ಕರೆದುಕೊಂಡು ಫಿರ್ಯಾದುದಾರರನ್ನು ಭೇಟಿ ಮಾಡಿ ಚೆಕ್ಕನ್ನು ವಾಪಸ್ಸು ಮಾಡುವಂತೆ ಕೇಳಿದ್ದೆನು. ಆಗ ಫಿರ್ಯಾದುದಾರರು ನಾನು ಮನೆಯನ್ನು ಬದಲಾಯಿಸಿದ್ದೇನೆ ಚೆಕ್ಕು ಕಳೆದು ಹೋಗಿದೆ ಅದು ಸಿಕ್ಕಿದ ಕೂಡಲೇ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು. ನಂತರದಲ್ಲಿ ಫಿರ್ಯಾದುದಾರರು ಸದರಿ ಚೆಕ್ಕನ್ನು ನನಗೆ ನೀಡದೇ ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಸದರಿ ಚೆಕ್ಕನ್ನು ಉಪಯೋಗಿಸಿ ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಕಾರಣ ಈ ಪ್ರಕರಣವನ್ನು ವಜಾ ಮಾಡಿ ನನ್ನನ್ನು ಖುಲಾಸೆಗೊಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಪಾಟಿ ಸವಾಲುಃ ಫಿರ್ಯಾದುದಾರರ ಪರ ವಕೀಲರು ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಗಿದೆ )

ಓ. ಹೇ, ಕೇ, ಸರಿ ಇದೆ,

ಪ್ರಧಾನ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ